Website: www.dpl.karnataka.gov.in

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ e-mail:director-dpl@ka.gov.in

ಸಂ:ಸಾಗ್ರಂಇ/ಸಿಕ/ಮುಖವಿ/2023ಪ್ರ/06/2023-24

ನಿರ್ದೇಶಕರ ಕಛೇರಿ
ವಿಶ್ವೇಶ್ವರಯ್ಯ ಮುಖ್ಯಗೋಪುರ,
4ನೇ ಮಹಡಿ, ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು-560001.
ದಿನಾಂಕ: 28-12-2023.

==================================================================

## : ಪತ್ರಿಕಾ ಪ್ರಕಟಣೆ :

**2023ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಕನ್ನಡ, ಆಂಗ್ಲ ಮತ್ತು ಭಾರತೀಯ ಇತರೆ ಭಾಷೆಯ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸುವ ಕುರಿತು.**

**********

2023 ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ಗ್ರಂಥಸ್ವಾಮ್ಯ ವಿಭಾಗ. ರಾಜ್ಯ ಕೇಂದ್ರ ಗ್ರಂಥಾಲಯ. ಕಬ್ಬನ್ ಉದ್ಯಾನವನ. ಬೆಂಗಳೂರು ಇಲ್ಲಿ ದಿನಾಂಕ: 31-01-2024 ರ ಒಳಗಾಗಿ ಕಾಪಿರೈಟ್ ಮಾಡಿಸಿರತಕ್ಕದ್ದು. ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಹಾಗೂ ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಸಾರ್ವಜನಿಕ ಓದುಗರಿಗೆ ಒದಗಿಸಲು ಅನುಕೂಲವಾಗುವಂತೆ ಸ್ವ-ಇಚ್ಛೆ/ಆಸಕ್ತಿಯುಳ್ಳ ಲೇಖಕರು. ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಪುಸ್ತಕವನ್ನು ಆಯ್ಕೆಗೆ ಸಲ್ಲಿಸುವಾಗ ತಮ್ಮ ಅನುಮತಿ ಪತ್ರದೊಂದಿಗೆ ಸದರಿ ಪುಸ್ತಕದ ಸಾಫ್ಟ್ ಕಾಪಿಯನ್ನು ಸಿ. ಡಿ ರೂಪದಲ್ಲಿ (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು. ಸಾರ್ವಜನಿಕ ಗ್ರಂಥಾಲಯ ಇಲಾಖೆ. ವಿಶ್ವೇಶ್ವರಯ್ಯ ಮುಖ್ಯ ಗೋಪುರ. 4ನೇ ಮಹಡಿ. ಡಾ: ಅಂಬೇಡ್ಕರ್ ವೀಧಿ. ಬೆಂಗಳೂರು-೫೬೦೦೦೧ ಇಲ್ಲಿಗೆ **ದಿನಾಂಕ: 05-02-2024 ರಂದು ಸಂಜೆ 5.30 ಗಂಟೆಯೊಳಗೆ** ಸಲ್ಲಿಸುವುದು. ತದನಂತರ ಬಂದ ಯಾವುದೇ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗದಿತ ಅರ್ಜಿ ನಮೂನೆ ಮತ್ತು ನಿಬಂಧನೆಗಳ ಮಾಹಿತಿಗಾಗಿ ಇಲಾಖಾ ಅಂತರ್ಜಾಲ www.dpl.karnataka.gov.in ಹಾಗೂ ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಉಪನಿರ್ದೇಶಕರು/ಮುಖ್ಯ ಗ್ರಂಥಾಲಯಾಧಿಕಾರಿಗಳ ಕಛೇರಿಗಳಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ೦೮೦-೨೨೮೬೪೯೯೦, ೨೨೮೬೭೩೫೮ ಸಂಪರ್ಕಿಸಲು ಕೋರಿದೆ.

(ಡಾ.ಸತೀಶ್‌ಕುಮಾರ ಎಸ್. ಹೊಸಮನಿ)
ನಿರ್ದೇಶಕರು.
ಸಾರ್ವಜನಿಕ ಗ್ರಂಥಾಲಯ ಇಲಾಖೆ.
ಬೆಂಗಳೂರು.

Cc: BOS/2023 Patrika prakatane

Website: www.dpl.karnataka.gov.in

22864990, 22867358
email: director-dpl@ka.gov.in

# ಕರ್ನಾಟಕ ಸರ್ಕಾರ
## ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ:ಸಾಗ್ರಂಇ/ನಿಕ/ಪುಖವಿ/2023ಪ್ರ/06/2023–24

ನಿರ್ದೇಶಕರ ಕಛೇರಿ
ವಿಶ್ವೇಶ್ವರಯ್ಯ ಮುಖ್ಯಗೋಪುರ,
4ನೇ ಮಹಡಿ, ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು-560001.
ದಿನಾಂಕ: 28-12-2023

===============================================================

**: ಪ್ರಕಟಣೆ :**

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ ಏಕಗವಾಕ್ಷಿ, ಯೋಜನೆಯಡಿ 2023ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.

*****

2023 ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಸಾಹಿತ್ಯ, ಕಲೆ, ವಿಜ್ಞಾನ, ವೃತ್ತಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ ಉತ್ಪಾದನಾ ಯೋಜನೆ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ, ಸಾಂದರ್ಭಿಕ ಮತ್ತು ಪರಾಮರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ/ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳ ಕನ್ನಡ/ಆಂಗ್ಲ/ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳಿಂದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಸ್ವೀಕರಿಸಲು ಅರ್ಜಿಗಳನ್ನು ಆಹ್ವಾನಿಸಿದೆ. ಪುಸ್ತಕಗಳು ಈ ಕೆಳಗೆ ತಿಳಿಸಿದ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

1. 2023 ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರಬೇಕು/ ಮರುಮುದ್ರಣವಾದಲ್ಲಿ, ಹತ್ತು ವರ್ಷಗಳ ಅಂತರವಿರಬೇಕು. ಈ ಬಗ್ಗೆ ದೃಢೀಕರಣ ಪತ್ರವನ್ನು ನೀಡಬೇಕು.

2. ಪುಸ್ತಕದ ಶೀರ್ಷಿಕೆ, ಗ್ರಂಥಕರ್ತರ ಹೆಸರು, ಪ್ರಕಾಶಕರ ಹೆಸರು, ಪುಟ ಸಂಖ್ಯೆ, ಪ್ರಕಟಣೆಯ ವರ್ಷ, ಆವೃತ್ತಿಯ ಎಲ್ಲಾ ವರ್ಷಗಳ ವಿವರ, ಮುಖ ಬೆಲೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಇವುಗಳಲ್ಲಿ ತಾಂತ್ರಿಕ ಲೋಪದೋಷಗಳು ಏನಾದರೂ ಇದ್ದಲ್ಲಿ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇದೆ. ಕೃತಿಯ ಮೊದಲ ಮುದ್ರಣಕ್ಕೂ ಮತ್ತು ಮರುಮುದ್ರಣಕ್ಕೂ ಹತ್ತು ವರ್ಷಗಳ ಅಂತರವಿದೆ (ಮೊದಲ ಮುದ್ರಣ ಮತ್ತು ಮರು ಮುದ್ರಣಕ್ಕೆ 10 ವರ್ಷಗಳ ಅಂತರ) ಎಂಬ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು. ಸುಳ್ಳು ಮಾಹಿತಿ ನೀಡಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

3. ಪುಸ್ತಕ ಖರೀದಿಗೆ ನಿಗದಿಯಾದ ಮೊತ್ತದಲ್ಲಿ ಶೇ.80 ರಷ್ಟು ಕನ್ನಡ ಪುಸ್ತಕಗಳು (ಎಲ್ಲಾ ವಿಷಯಗಳು ಸೇರಿ) ಶೇ.20 ರಷ್ಟು ಆಂಗ್ಲ ಭಾಷೆಯ ಪುಸ್ತಕಗಳು ಹಾಗೂ ಇತರೆ ಭಾರತೀಯ ಭಾಷೆಯ ಪುಸ್ತಕಗಳನ್ನು ಆಯ್ಕೆ ಮಾಡಲು ಅವಕಾಶವಿರುವುದರಿಂದ ನಿಯಮಾವಳಿಗಳಿಗೆ ಒಳಪಟ್ಟು ಪುಸ್ತಕಗಳನ್ನು ಆಯ್ಕೆಗೆ ಸಲ್ಲಿಸಬಹುದು. ಕರ್ನಾಟಕದಲ್ಲಿ ಪ್ರಕಟವಾದ ಆಂಗ್ಲ ಪುಸ್ತಕಗಳಿಗೆ ಆದ್ಯತೆ ಇರುತ್ತದೆ.

4. ಮೂವತ್ತು (30) ಪುಟಕ್ಕಿಂತ ಕಡಿಮೆ ಪುಟಗಳಿರುವ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸುವುದಿಲ್ಲ. (ಮಕ್ಕಳ ಪುಸ್ತಕ, ಎನ್.ಬಿ.ಟಿ. ಹಾಗೂ ನವಸಾಕ್ಷರತೆ ಸಾಹಿತ್ಯಕ್ಕೆ ಇದು ಅನ್ವಯಿಸುವುದಿಲ್ಲ) ಸೆಂಟರ್ ಪಿನ್ನಿಂಗ್ ಮಾಡಿರುವ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸುವುದಿಲ್ಲ.

5. ಲೇಖಕರೇ ಪ್ರಕಾಶಕರಾಗಿರುವ ಸಂದರ್ಭದಲ್ಲಿ ಲೇಖಕರೇ ಅರ್ಜಿ ಸಲ್ಲಿಸಬೇಕು.

6. ಪುಸ್ತಕಗಳ ಜೆರಾಕ್ಸ್ / ಸ್ಕ್ಯಾನ್ ಮಾಡಿ ಮುದ್ರಿಸಿರುವ ಪ್ರತಿಗಳನ್ನು ಆಯ್ಕೆಗೆ ಸ್ವೀಕರಿಸುವುದಿಲ್ಲ. ಅಸಮರ್ಪಕ (ಚೋರ) ಪ್ರಕಟಣೆ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸುವುದಿಲ್ಲ. ಆದಾಗ್ಯೂ ಅಸಮರ್ಪಕ (ಚೋರ) ಪ್ರಕಟಣೆ ಪುಸ್ತಕಗಳು ಎಂದು ಸಮಿತಿಯ ಗಮನಕ್ಕೆ ಕಂಡು ಬಂದಲ್ಲಿ ಅಂತಹ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ಹಾಗೂ ವಿತರಕರನ್ನು ಕಪ್ಪು ಪಟ್ಟಿಗೆ ಸೇರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

7. ಪುಸ್ತಕಗಳನ್ನು ಪ್ರಕಟಿಸುವ ಮೂಲ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ನೋಂದಣಿ ಪ್ರಮಾಣಪತ್ರದಲ್ಲಿ ಅವರ ವಿಳಾಸವನ್ನು ದಾಖಲು ಮಾಡಿರಬೇಕು.

8. ನ್ಯೂಸ್ ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಆಯ್ಕೆಗೆ ಸ್ವೀಕರಿಸುವುದಿಲ್ಲ.

. . . ..2

9. ಆಯ್ಕೆಗೆ ಒಪ್ಪಿಸಿದ ಯಾವುದೇ ಭಾಷೆಯ ಗ್ರಂಥಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ.

10. ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ತಾವು ಪ್ರಕಟಿಸಿದ ಪುಸ್ತಕಗಳನ್ನು ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಗ್ರಂಥಸ್ವಾಮ್ಯ (ಕಾಪಿರೈಟ್) ಕಾಯ್ದೆಯಡಿಯಲ್ಲಿ ಪ್ರತಿ ಗ್ರಂಥದ ಮೂರು ಪ್ರತಿಗಳನ್ನು ಮುಫತ್ತಾಗಿ ಸಲ್ಲಿಸಿ ನೋಂದಣಿಯನ್ನು ಮಾಡಿಸತಕ್ಕದ್ದು. ಆಯ್ಕೆಗಾಗಿ ಸಲ್ಲಿಸುವ ಪುಸ್ತಕದ ಕೊನೆಯ ಪುಟದಲ್ಲಿ ಅರ್ಜಿಯೊಂದಿಗೆ ನೋಂದಣಿ ಪತ್ರದ ನಕಲನ್ನು ಕಡ್ಡಾಯವಾಗಿ ಅಂಟಿಸಿರಬೇಕು. ಇಲ್ಲವೇ ಇದ್ದಲ್ಲಿ ಅಂತಹ ಗ್ರಂಥಗಳನ್ನು ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಯದಾಗಿರುತ್ತದೆ. ನೋಂದಣಿ ಪ್ರಮಾಣ ಪತ್ರದಲ್ಲಿರುವ ವಿಳಾಸಕ್ಕೆ ಮುಂದಿನ ಎಲ್ಲಾ ಪತ್ರ ವ್ಯವಹಾರಗಳನ್ನು ಮಾಡಲಾಗುವುದು.

11. ನಿಗದಿತ ಅರ್ಜಿ ನಮೂನೆಯಲ್ಲಿ (ಅರ್ಜಿ ನಮೂನೆಯು ಇಲಾಖೆಯ ಅಂತರ್ಜಾಲದಲ್ಲಿ www.dpl.karnataka.gov.in ಹಾಗೂ ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಲ್ಲಿ ದೊರೆಯುತ್ತವೆ) 1) ಅರ್ಜಿದಾರರ ಹೆಸರು ಮತ್ತು ವಿಳಾಸ 2) ಪ್ರಕಾಶಕರು/ ಸರಬರಾಜುದಾರರ ಹೆಸರು ಮತ್ತು ವಿಳಾಸ 3)ಎ) ಅರ್ಜಿದಾರರು ಪುಸ್ತಕದ ಲೇಖಕರೇ/ಪ್ರಕಾಶಕರೇ/ವಿತರಕರೇ ಬಿ) ಪುಸ್ತಕದ ಹಕ್ಕು 4) ಎ) ಪುಸ್ತಕದ ಶಿರೋನಾಮೆ ಬಿ) ಲೇಖಕರ ಹೆಸರು ಸಿ) ಸಂಪುಟಗಳ ಸಂಖ್ಯೆ ಡಿ) ಪುಸ್ತಕದ ವಿಷಯ 5) ಪ್ರಕಟಣಾ ವರ್ಷ 6) ಅನುವಾದವಾಗಿದ್ದಲ್ಲಿ ಮೂಲ ಲೇಖಕರ ಹೆಸರು ಮತ್ತು ಭಾಷೆ 7) ಎ) ಪುಸ್ತಕದ ಅಳತೆ ಬಿ) ಪುಟಗಳ ಸಂಖ್ಯೆ ಸಿ) ಬೈಂಡಿಂಗ್ ಡಿ)ಪುಸ್ತಕದ ಬೆಲೆ ಇ) ಪುಸ್ತಕ ಮುದ್ರಿಸಲು ಬಳಸಿದ ಕಾಗದದ ಗುಣಮಟ್ಟ 8) ಗ್ರಂಥವು ಮರುಮುದ್ರಣಗೊಂಡಿದ್ದರೆ, ಮೊದಲ ಆವೃತ್ತಿಯ ವರ್ಷ 9) ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ 10) ಲೇಖಕ, ಲೇಖಕ-ಪ್ರಕಾಶಕರು ಕಡ್ಡಾಯವಾಗಿ ಪ್ಯಾನ್ ಸಂಖ್ಯೆ ಹಾಗೂ ಪ್ರಕಾಶಕರು / ಮಾರಾಟಗಾರರು ಜಿ.ಎಸ್.ಟಿ. ನೊಂದಣಿ ಪ್ರಮಾಣ ಪತ್ರದ ಸಂಖ್ಯೆಯನ್ನು ನಮೂದಿಸುವುದು. ಮೇಲ್ಕಂಡ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಅರ್ಜಿಯ ಘೋಷಣಾ ಪ್ರಮಾಣ ಪತ್ರದಲ್ಲಿ ಸಹಿ ಮಾಡುವುದು ಮತ್ತು ಆಯ್ಕೆಯಾದ ಪುಸ್ತಕಗಳಿಗೆ ಸರ್ಕಾರ ನಿಗದಿಪಡಿಸಿದ ಬೆಲೆಯಂತೆ, ಬೆಲೆಯನ್ನು ನಿಗದಿಪಡಿಸಲಾಗುವುದು.

12. 2023ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ದಿನಾಂಕ: 31-01-2024 ರ ಒಳಗಾಗಿ ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ _ದಿನಾಂಕ: 05-02-2024 ರ ಸಂಜೆ 5.00ರ_ ಗಂಟೆ ಒಳಗಾಗಿ ಸಲ್ಲಿಸುವುದು. ತದನಂತರ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸಲಾಗುವುದಿಲ್ಲ.

13. ಆಯ್ಕೆಗಾಗಿ ಸಲ್ಲಿಸುವ ಗ್ರಂಥಗಳ ಶೀರ್ಷಿಕೆ ಪುಟದ ಹಿಂಭಾಗದ ಪುಟದಲ್ಲಿ (imprint page) ಈ ಕೆಳಗಿನ ಅಂಶಗಳನ್ನು ಸ್ಪಷ್ಟವಾಗಿ ಮುದ್ರಿಸುವುದು ಕಡ್ಡಾಯವಾಗಿರುತ್ತದೆ. ಇಲ್ಲದಿದ್ದಲ್ಲಿ ಪುಸ್ತಕವನ್ನು ತಿರಸ್ಕರಿಸಲಾಗುವುದು.
ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಪುಟಗಳ ಸಂಖ್ಯೆ, ಪುಸ್ತಕದ ಅಳತೆ, ಉಪಯೋಗಿಸಿರುವ ಕಾಗದದ ಗುಣಮಟ್ಟ, ಗ್ರಂಥಸ್ವಾಮ್ಯ ವಿವರ, ಮುದ್ರಣ ವರ್ಷ, ಆವೃತ್ತಿ, ಬೆಲೆ, ಮುಖಪುಟ, ಪುಸ್ತಕದ ಒಳಪುಟ ವಿನ್ಯಾಸ, ರೇಖಾಚಿತ್ರಗಾರರ ವಿವರ ಮತ್ತು ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಹಾಗೂ ಮುದ್ರಕರ ವಿಳಾಸಗಳನ್ನು ಕಡ್ಡಾಯವಾಗಿ ಮುದ್ರಿಸಿರಬೇಕು. ಕೈಯಿಂದ ಬರೆಯಲಾದ, ರಬ್ಬರ್ ಸ್ಟಾಂಪ್‌ನಿಂದ ಮುದ್ರಿಸಲಾದ ಅಥವಾ ಬೇರೆಯಾಗಿ ಅಂಟಿಸಲಾದ ಬೆಲೆಗಳಿದ್ದಲ್ಲಿ ಅಂತಹ ಪುಸ್ತಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

14. ಸರ್ಕಾರದ ಆದೇಶ ಸಂ. ಇಡಿ 283 ಎಲ್‌ಬಿಬಿ 2009, ಬೆಂಗಳೂರು ದಿನಾಂಕ 14-06-2010 ಮತ್ತು ಸರ್ಕಾರದ ಆದೇಶ ಸಂ. ಇಡಿ 234 ಎಲ್‌ಬಿಬಿ 2015, ಬೆಂಗಳೂರು ದಿನಾಂಕ 22-12-2017 ರಲ್ಲಿ ತಿಳಿಸಿರುವ ಪುಸ್ತಕ ಅಳತೆಗೆ ಅನುಗುಣವಾಗಿ ಮುದ್ರಿಸಿರುವ ಪುಸ್ತಕಗಳನ್ನು ಮಾತ್ರ ಆಯ್ಕೆಗೆ ಸ್ವೀಕೃರಿಸಲಾಗುವುದು. ಪುಸ್ತಕದ ಅಳತೆ ಸರಿಯಾಗಿಲ್ಲದ (unsize books) ಹಾಗೂ ಹೆಚ್ಚು-ಕಡಿಮೆ ಅಳತೆಗಳಿದ್ದಲ್ಲಿ ಕಡಿಮೆ ಅಳತೆಗೆ ಅನುಗುಣವಾಗಿ ದರವನ್ನು ನಿಗಧಿಪಡಿಸಲಾಗುವುದು. ಸರ್ಕಾರವು ನಿಗದಿಪಡಿಸಲಾದ ಅಳತೆಯ ಕಾಗದವನ್ನು ಮಾತ್ರ ಮುದ್ರಣಕ್ಕೆ ಬಳಸುವುದು. ಕಡಿಮೆ ಗುಣಮಟ್ಟದ ಕಾಗದವನ್ನು ಬಳಸಿ ಪುಸ್ತಕವನ್ನು ಮುದ್ರಿಸಿದಲ್ಲಿ ಅಂತಹ ಪುಸ್ತಕಗಳನ್ನು ಆಯ್ಕೆ ಮಾಡದೇ ತಿರಸ್ಕರಿಸಲಾಗುವುದು.

**ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು**

1. ಪುಸ್ತಕದ ಒಂದು ಪ್ರತಿ
2. ಕಾಪಿರೈಟ್‌ನ ನೋಂದಣಿಯ ದೃಢೀಕರಿಸಿದ ನಕಲುಪ್ರತಿ.
3. ವಿತರಕರು ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ನಕಲು ಪ್ರತಿಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಸಲ್ಲಿಸುವುದು.

ಈ ಮೇಲ್ಕಂಡ ದಾಖಲಾತಿಗಳು ಇಲ್ಲದಿದ್ದಲ್ಲಿ ಪುಸ್ತಕವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

D:\ BOS/2023 Patrika prakatane

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ

ನಿರ್ದೇಶಕರ ಕಛೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

**ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಖರೀದಿ ಆಯ್ಕೆಗಾಗಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಸಲ್ಲಿಸುವ ಅರ್ಜಿ ನಮೂನೆ - 2023**

ಅರ್ಜಿದಾರರ
ಇತ್ತೀಚಿನ
ಭಾವಚಿತ್ರ

| | | | |
|---|---|---|---|
| 1. | | ಅರ್ಜಿದಾರರ ಹೆಸರು ಮತ್ತು ವಿಳಾಸ<br>ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 2. | | ಪ್ರಕಾಶಕರು/ಸರಬರಾಜುದಾರರ ಹೆಸರು ಮತ್ತು ವಿಳಾಸ<br>ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 3. | (a) | ಅರ್ಜಿದಾರರು ಪುಸ್ತಕದ ಲೇಖಕರೆ/ಪ್ರಕಾಶಕರೆ/ವಿತರಕರೆ ? | |
| | (b) | ಪುಸ್ತಕದ ಹಕ್ಕು | ಲೇಖಕರದು/ಪ್ರಕಾಶಕರದು |
| 4. | (a) | ಪುಸ್ತಕದ ಭಾಷೆ | |
| | (b) | ಪುಸ್ತಕದ ಶಿರೋನಾಮೆ | |
| | (c) | ಲೇಖಕರ ಹೆಸರು | |
| | (d) | ಸಂಪುಟಗಳ ಸಂಖ್ಯೆ (ಇದ್ದಲ್ಲಿ) | |
| | (e) | ಪುಸ್ತಕದ ವಿಷಯ | |
| 5. | | 2023 ರಲ್ಲಿ ಪ್ರಥಮ ಮುದ್ರಣ, ಮರು ಮುದ್ರಣವಾಗಿದ್ದಲ್ಲಿ ಕನಿಷ್ಟ 10 ವರ್ಷಗಳ ಅಂತರವಿರಬೇಕು. | ಪ್ರಥಮ ಮುದ್ರಣ -<br>ಮರು ಮುದ್ರಣದ ವಿವರ - |
| 6. | | ಅನುವಾದವಾಗಿದ್ದಲ್ಲಿ ಮೂಲ ಲೇಖಕರ ಹೆಸರು ಮತ್ತು ಭಾಷೆ | |

| | | | |
|---|---|---|---|
| ೭. | (a) | ಪುಸ್ತಕದ ಆಕೃತಿ | |
| | (b) | ಪುಟಗಳ ಸಂಖ್ಯೆ | |
| | (c) | ಬೈಂಡಿಂಗ್ | ಉತ್ತಮ / ಸಾಮಾನ್ಯ |
| | (d) | ಪುಸ್ತಕದ ಬೆಲೆ | ಉತ್ತಮ ಪ್ರತಿ ರೂ. . . . . . . . . . . .<br>ಸಾದಾ ಪ್ರತಿ ರೂ. . . . . . . . . . . . |
| | (e) | ಪುಸ್ತಕ ಮುದ್ರಿಸಲು ಬಳಸಿದ ಕಾಗದದ ಗುಣಮಟ್ಟ (ಜಿ.ಎಸ್.ಎಂ.ನಲ್ಲಿ ನಮೂದಿಸುವುದು) | |
| ೮. | | ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ | |
| ೯. | | ಪುಸ್ತಕದ ಸಾಫ್ಟ್ ಕಾಪಿಯನ್ನು ಸಿ.ಡಿ. ರೂಪದಲ್ಲಿ ಅನುಮತಿ ಪತ್ರದೊಂದಿಗೆ ಲಗತ್ತಿಸುವುದು. | ಲಗತ್ತಿಸಿದೆ / ಲಗತ್ತಿಸಿಲ್ಲ. |
| 10. | | ಅರ್ಜಿದಾರರು ಕಡ್ಡಾಯವಾಗಿ ಪ್ಯಾನ್, ಆಧಾರ್ ಸಂಖ್ಯೆ ಮತ್ತು ಜಿ.ಎಸ್.ಟಿ. ನೋಂದಣಿ ಪತ್ರದ ಸಂಖ್ಯೆಯನ್ನು ನಮೂದಿಸುವುದು. | |

## ಘೋಷಣಾ ಪ್ರಮಾಣ ಪತ್ರ

ಶ್ರೀಮತಿ / ಶ್ರೀ ______________________ ಆದ ನಾನು, ಮೇಲೆ ದಾಖಲಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ತಪ್ಪಿದ್ದಲ್ಲಿ ಕಾನೂನಾತ್ಮಕವಾಗಿ ಇಲಾಖೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ :
ದಿನಾಂಕ :

ಅರ್ಜಿದಾರರ ಸಹಿ & ಮೊಹರು
ಅರ್ಜಿದಾರರ ಹೆಸರು ( )

**ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:**

1. ಪ್ರತಿ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಅರ್ಜಿ ನಮೂನೆಯಲ್ಲಿ ವಿವರ ಸಲ್ಲಿಸುವುದು.
2. ವಿತರಕರು ಸರಬರಾಜು ಹಕ್ಕನ್ನು ಮೂಲ ಪ್ರಕಾಶಕರಿಂದ ಪಡೆದಿದ್ದಲ್ಲಿ ಅದರ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
3. ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ದಿನಾಂಕ: 05-02-2024 ರ ಒಳಗಾಗಿ(ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು – 560 001 ಇಲ್ಲಿಗೆ ಸಲ್ಲಿಸುವುದು.
4. ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 080-22864990 ಹಾಗೂ 080-22867358.

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ
ನಿರ್ದೇಶಕರ ಕಛೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಸಾರ್ವಜನಿಕ ಓದುಗರಿಗೆ ಅನುಕೂಲವಾಗುವಂತೆ ಒದಗಿಸಲು ಆಸಕ್ತಿಯುಳ್ಳ ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಪುಸ್ತಕವನ್ನು ಆಯ್ಕೆಗೆ ಸಲ್ಲಿಸುವಾಗ ಪುಸ್ತಕದ ಸಾಫ್ಟ್ ಕಾಪಿಯನ್ನು ನೀಡಲು ಒಪ್ಪಿಗೆ ಇದ್ದಲ್ಲಿ ಮಾತ್ರ ಭರ್ತಿ ಮಾಡಬೇಕಾದ ಅರ್ಜಿ ನಮೂನೆ

| | | |
|---|---|---|
| 1. | ಅರ್ಜಿದಾರರ ಹೆಸರು ಮತ್ತು ವಿಳಾಸ<br>(ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು<br><br>ಇ-ಮೇಲ್ ವಿಳಾಸ ಮತ್ತು ದೂರವಾಣಿ ಸಂಖ್ಯೆ | |
| 2. | ಅರ್ಜಿದಾರರು ಪುಸ್ತಕದ ಲೇಖಕರೇ/ಪ್ರಕಾಶಕರೇ/ವಿತರಕರೇ? ಸಹಯೋಗದೊಂದಿಗೆ ಪ್ರಕಟಿಸಿದ ಪುಸ್ತಕವಾಗಿದ್ದಲ್ಲಿ ಅನುಮತಿ ಪತ್ರ ಸಲ್ಲಿಸುವುದು | |
| 3. | ಪುಸ್ತಕದ ಹಕ್ಕು | ಲೇಖಕರು/ಪ್ರಕಾಶಕರು/ಹೆಂಡತಿ/ಮಗ/ಮಗಳು |
| 4. | ಪುಸ್ತಕದ ಭಾಷೆ | ಕನ್ನಡ/ಆಂಗ್ಲ/ಹಿಂದಿ/ಭಾರತೀಯ ಇತರ ಭಾಷೆ |
| 5. | ಪುಸ್ತಕದ ಶಿರೋನಾಮೆ | |
| 6. | ಲೇಖಕರ ಹೆಸರು | |
| 7. | ಸಂಪುಟಗಳ ಸಂಖ್ಯೆ (ಇದ್ದಲ್ಲಿ) | |
| 8. | ಪುಸ್ತಕದ ವಿಷಯ | |
| 9. | 2023 ರಲ್ಲಿ ಪ್ರಥಮ ಮುದ್ರಣ /ಮರುಮುದ್ರಣವಾಗಿದ್ದಲ್ಲಿ 10 ವರ್ಷಗಳ ಅಂತರವಿರಬೇಕು | ಪ್ರಥಮ ಮುದ್ರಣ/ಮರು ಮುದ್ರಣ/ಆವೃತ್ತಿ |
| 10. | ಅನುವಾದವಾಗಿದ್ದಲ್ಲಿ ಮೂಲ ಲೇಖಕರ ಹೆಸರು ಮತ್ತು ಭಾಷೆ | |
| 11. | ಪುಟಗಳ ಸಂಖ್ಯೆ ಹಾಗೂ ಸಂಪೂರ್ಣ ಮಾಹಿತಿ | |
| 12. | ಪುಸ್ತಕದ ಬೆಲೆ | |
| 13. | ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ | |
| 14. | ಪುಸ್ತಕದ ಸಾಫ್ಟ್ ಕಾಪಿಯನ್ನು ನೀಡಲು ಒಪ್ಪಿಗೆ ಇದೆಯೇ? | ಒಪ್ಪಿಗೆ ಇದೆ/ಒಪ್ಪಿಗೆ ಇಲ್ಲ |
| 15. | ಒಪ್ಪಿಗೆ ಇದ್ದಲ್ಲಿ ಪುಸ್ತಕ ಯಾವ ನಮೂನೆಯಲ್ಲಿದೆ (Format) | |
| 16. | ಪುಸ್ತಕದ ಗಾತ್ರ (MB/GB) | |

<u>ಘೋಷಣಾ ಪ್ರಮಾಣ ಪತ್ರ</u>

ಶ್ರೀಮತಿ/ಶ್ರೀ ____________________ ಆದ ನಾನು, ಮೇಲೆ ದಾಖಲಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ಪುಸ್ತಕದ ಸಾಫ್ಟ್ ಕಾಪಿಯನ್ನು ಡಿಜಿಟಲ್ ಗ್ರಂಥಾಲಯ ಸೇವೆ ಒದಗಿಸಲು ಇಲಾಖೆಯು ಬಳಸಿಕೊಳ್ಳಲು ನನ್ನ ಸಂಪೂರ್ಣ ಒಪ್ಪಿಗೆಯನ್ನು ನೀಡಿರುತ್ತೇನೆ ಹಾಗೂ ನನ್ನಿಂದ ಅಥವಾ ನನ್ನ ಕುಟುಂಬದ ಸದಸ್ಯರಿಂದ ಯಾವುದೇ ಅಭ್ಯಂತರ ಇರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ & ಹೆಸರು
( )

Government of Karnataka
Department of Public Libraries
Office of the Director, 4th floor, Visveshwaraiah main Tower,
Dr. Ambedkar Veedhi, Bangalore-560 001.

## Application Form for submission of 2023 publication books to be supplied to Libraries under Single Window System in the Department of Public Libraries

Latest Photograph of the Applicant

| | | | |
|---|---|---|---|
| 1. | | Name of the Applicant and Permanent Address<br>Mobile/Landline Phone No. with Pincode | Pin code: |
| 2. | | Name of the Publisher/ Supplier/Distributor<br>Permanent Address<br>Mobile/Landline Phone No. with Pincode | Pincode: |
| 3. | (a) | Is the Applicant Author/Publisher/ Distributor? | Author/Publisher/Distributor |
| | (b) | Rights of the Book | Author/Publisher |
| 4. | (a) | Language of the book | |
| | (b) | Title of the Book and sub title if any | |
| | (c) | Author Name | |
| | (d) | Volumes (If any) | |
| | (e) | The book deals with which subject | |
| 5. | | First Edition 2023/Reprint Edition (If reprinted there must be a minimum gap of 10 years ) | |
| 6. | | Is the book original or translated? (If translated original author name and language) | |

| | | | |
|---|---|---|---|
| 7. | (a) | Size of the Book | |
| | (b) | Total Number of Pages | |
| | (c) | Binding | Normal Paper back/Hard Bound |
| | (d) | Cost of the Book | Normal Paper back Rs............<br><br>Hard Bound Rs........... |
| | (e) | Quality of the Paper used for printing the book (Should be mentioned in GSM) | |
| 8. | | Copy Right Registration Number, Date and Year | |
| 9. | | For Digital Public Library use: If the author/applicant willing to give soft copy of the book in CD Format with letter, CD should be submit in the PDF Format | Enclosed/Not Enclosed |
| 10. | | The Applicant should compulsorily mention PAN Number/GST registration copy. | |

## Declaration

I Smt/Sri__________________ declares that the above information furnished by me is found correct and in case of any wrong information that may be found, The Director, Department of public Libraries, Bangalore is having full power to reject my application and forfeit the bill amount without any prior information.

Place: Signature and Name of the Applicant

Date:

Important information:

1. Each title should be submitted in a separate form.
2. If the applicant is a distributor, permission is to be sought from the copy right holder (i.e., either author/publisher) A copy of the same is to be enclosed.
3. Along with the application a copy of the book should be submitted within the last date: 05-02-2024 to Office of the Director, Department of Public Libraries, Vishweshwaraih Main Tower, 4th floor, Dr. Ambedkar Veedhi, Bangalore-560 001.
4. For any further information the above office may be contacted vide phone Nos. 080-22864990 and 080-22867358